ದಿನಾಂಕ-15-10-2022 ರಂದು ಸಮಯ ಬೆಳಿಗ್ಗೆ 10.30 ಗಂಟೆಗೆ ವಾರ್ಡ ಸಂಖ್ಯೆ-52 ಮಹಾಲಕ್ಷ್ಮಿಪುರಂ ವಾರ್ಡ ಕಛೇರಿಯಲ್ಲಿ ವಾರ್ಡ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ ಕಂದಾಯ ಪರಿವೀಕ್ಷಕರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು..

ಹಾಜರಿದ್ದ ಅಧಿಕಾರಿಗಳು

1. ಶ್ರೀ. ಹೆಚ್ ರಂಗನಾಥ ನೋಡಲ್ ಅಧಿಕಾರಿಗಳು (ಅಧ್ಯಕ್ಷರು)
2. ಶ್ರಿ ನಂಜುಂಡಪ್ಪ ಜಿ ವಿ ಕಂದಾಯ ಪರಿವೀಕ್ಷಕರು (ಕಾರ್ಯದರ್ಶಿಗಳು)
3. ಜಿ ಟಿ ಧನಂಜಯ ಸಹಾಯಕ ಅಭಿಯಂತರರು ವಾರ್ಡ-52
4. ಶ್ರಿ ಲೋಹಿತ್ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ-52
5. ಶ್ರೀಮತಿ ಗೀತಾ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ-52
6. ಶ್ರಿಮತಿ ಸ್ಮಿತಾ ಕಂದಾಯ ವಸೂಲಿಗಾರರು ವಾರ್ಡ-52
7. ಶ್ರೀ ಕಾಂತರಾಜು ಬೀದಿ ದೀಪ ಗುತ್ತಿಗೆದಾರರು (ಎಲ್. ಇ ಡಿ ಲೈಟ್ಸ್)
8. ವೆಂಕಟೇಶ್ ಜಿ ಕೆ ಕೆಲಸ ಪರಿವೀಕ್ಷಕರು ವಾರ್ಡ-52
9. ಗಂಗಾಧರಚಾರಿ ಜೆ ಮಾರ್ಷಲ್ ವಾರ್ಡ-52
10. ಲೋಕೇಶ್ ಪಶು ಸಂಗೋಪನ ಪರಿವೀಕ್ಷಕರು
11. ರಾಘವೇಂದ್ರ BWSSB ಕಛೇರಿಯಿಂದ
12. ನಾರಾಯಣ್ ನಿವಾಸಿಗಳು ಸರಸ್ವತಿಪುರಂ ವಾರ್ಡ-52
13. ಧಶರತ್ ನಾಯ್ಕು ನಿವಾಸಿಗಳು ಜೆ ಸಿ ನಗರ

ಶ್ರಿ ನಂಜುಂಡಪ್ಪ ಜಿ ವಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಅಧಿಕಾರಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು. ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಓದಿ ತಿಳಿಸಿದರು.

ಈ ದಿನದ ಸಭೆಯಲ್ಲಿ ಚರ್ಚಿಸಿದ ಹಾಗೂ ಕ್ರಮವಹಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ವಿವರ | ಕ್ರಮ |
|---|---|---|
| 01 | 67ನೇ **ಕರ್ನಾಟಕ ರಾಜ್ಯೋತ್ಸವದ** ಅಂಗಾವಾಗಿ ದಿನಾಂಕ-28-10-2022 ರಂದು ಬೆಳಿಗ್ಗೆ 11 ಘಂಟೆಗೆ ಸರಿಯಾಗಿ "**ಕೋಟಿ ಕಂಠ ಗಾಯನ**" ಕಾರ್ಯಕ್ರಮವನ್ನು ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ ಹಾಗೂ ಹೊರದೇಶಗಳಲ್ಲಿ ಏಕಕಾಲದಲ್ಲಿ ಮೊಳಗಲಿದ್ದು ಈ ವಿನೂತನ ಕಾರ್ಯಕ್ರಮವನ್ನು ಬಿ ಬಿ ಎಂಪಿ ವ್ಯಾಪ್ತಿಯಲ್ಲಿ ಸಂಪೂರ್ಣವಾಗಿ ಯಶಸ್ವಿಗೊಳಿಸುವ ಸಂಬಂದ ವಾರ್ಡ ಸಂಖ್ಯೆ-52 ಮಹಾಲಕ್ಷ್ಮಿಪುರಂ ವಾರ್ಡನಲ್ಲಿ ಆಯೋಜಿಸುವ ಬಗ್ಗೆ. | 1. ವಾರ್ಡನಲ್ಲಿ ಈ ಕಾರ್ಯಕ್ರಮವನ್ನು 250 ಮಂದಿ ಭಾಗವಹಿಸುವಿಕೆಯೊಂದಿಗೆ ಆಯೋಜಿಸುವುದು ಸ್ಥಳೀಯ ಗಣ್ಯರು, ಜನಪ್ರತಿನಿದಿಗಳು, ವಾರ್ಡ ಕಮಿಟಿ ಅಧ್ಯಕ್ಷರು/ಸದಸ್ಯರು, ಪೌರ ಕಾರ್ಮಿಕರು, ತೋಟಗಾರಿಕೆ ಮಾಲಿಗಳು ಇತರರು<br>2. ಈ ಕಾರ್ಯಕ್ರಮವನ್ನು ಮಹಾಲಕ್ಷ್ಮಿಪುರಂ ನ ಡಾ. ರಾಜ್ ಕುಮಾರ್ ಒಳಾಂಗಣ ಕ್ರೀಡಾಂಗಣದ ಮುಂಭಾಗದಲ್ಲಿ ನಡೆಸಲು ತೀರ್ಮಾನಿಸಲಾಯಿತು<br>3.ಈ ಕಾರ್ಯಕ್ರಮದ ಬಗ್ಗೆ ಜನರಿಗೆ ಅರಿವು ಮೂಡಿಸಲು ಪ್ರಚಾರ ಕಾರ್ಯಕೈಗೊಳ್ಳುವುದು |

| | | |
|---|---|---|
| | | 4.ಈ ಕಾರ್ಯಕ್ರಮದ ಬಗ್ಗೆ ಬಿ ಬಿ ಎಂ ಪಿ ವಾಹನದಲ್ಲಿ ಆಡಿಯೋ ಪ್ರಕಟಣೆ ಮಾಡಿಸುವುದು 4.ವಾರ್ಡ ವ್ಯಾಪ್ತಿಯಲ್ಲಿನ ವಿವಿದ ನಾಗರೀಕ ಕ್ಷೇಮಾಭಿವೃದ್ಧಿ ಸಂಘಗಳು , ಸ್ತ್ರೀ ಶಕ್ತಿ ಸಂಘಗಳು ಹಾಗು ಇತರೆ ಸಂಘ ಸಂಸ್ಥೆಗಳನ್ನು ಆಹ್ವಾನಿಸುವುದು. ಹಾಗೂ ಇತರೆ ಅಗತ್ಯ ಪೂರ್ವಸಿದ್ಧತೆ ಮಾಡಿಕೊಳ್ಳುವುದು |
| 02 | ಗಣೇಶ ಬ್ಲಾಕ್ ಕರ್ನಾಟಕ ಬ್ಯಾಂಕ್ ಮುಂಭಾಗದ 5,6,7 ನೇ ಅಡ್ಡರಸ್ತೆ ಮೆಟ್ಟಿಲುಗಳನ್ನು ಹಾಕುವ ಬಗ್ಗೆ. | ವಾರ್ಡ ಅಬಿಯಂತರರು |
| 03 | ಐ ಪಿ ಪಿ ಹಾಸ್ಪಿಟಲ್ (ಪ್ರಾಥಮಿಕ ಆರೋಗ್ಯ ಕೇಂದ್ರ) ದ ಪಕ್ಕದಲ್ಲಿರುವ ಖಾಲಿ ನಿವೇಶನದಲ್ಲಿನ ಕಸ ತೆಗೆಯುವುದರ ಬಗ್ಗೆ | ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗು ಮಾರ್ಷಲ್ ಗಳು |
| 04 | ಗಣೇಶ ಬ್ಲಾಕ್ ಜೈನ್ ಟೆಂಪಲ್ ಹತ್ತಿರ ಮೋರಿ ಬ್ಲಾಕ್ ಆಗಿರುವ ಬಗ್ಗೆ. | ವಾರ್ಡ ಅಬಿಯಂತರರು |
| 05 | ಎ ಜಿ ಬಿ ಲೇಔಟ್ 2 ನೇ ಹಂತ ಚಪಾತಿ ಮನೆ ಹತ್ತಿರ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಬಗ್ಗೆ, ನಿವಾಸಿಗಳ ದೂರು | ವಾರ್ಡ ಅಬಿಯಂತರರು |
| 06 | 9 ನೇ ಅಡ್ಡರಸ್ತೆ ಹಾಗು ಸರಸ್ವತಿ ಸಮುದಾಯ ಭವನದ ಹತ್ತಿರ ಒಳಚರಂಡಿ ಪೈಪ್ ಲೈನ್ ಕುಸಿದು ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಬಗ್ಗೆ ನಾರಾಯಣ್ ರವರ ದೂರಿನ ಬಗ್ಗೆ | ಸ. ಅ ಬಿ ಬಿ ಎಂ ಪಿ & ಸ. ಅ. ಬಿ. ಡಬ್ಲ್ಯು. ಎಸ್. ಎಸ್. ಬಿ. |
| 07 | ಈ ದಿನ ವಾರ್ಡ ಕಮಿಟಿ ಸಭೆಗೆ ಬೇರೆ ಬೇರೆ ಇಲಾಖೆಯ ಕೆಲವು ಅಧಿಕಾರಿಗಳು ಗೈರು ಹಾಜರಾಗಿದ್ದು ಮಾನ್ಯ ಮುಖ್ಯ ಆಯುಕ್ತರ ಸೂಚನೆಯಂತೆ ಪ್ರತಿ ತಿಂಗಳ 1ನೇ ಶನಿವಾರ ಮತ್ತು 3ನೇ ಶನಿವಾರ ವಾರ್ಡಕಮಿಟಿ ಸಭೆನಡೆಯುತ್ತಿದ್ದು ಮಂದಿನ ಎಲ್ಲಾ ಸಭೆಗಳಿಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಲು ತಿಳಿಸಲಾಗಿದೆ. ಹಾಗು ಈ ಬಗ್ಗೆ ಗೈರುಹಾಜರಾದ ಇಲಾಖೆಗಳಿಗೆ ಪತ್ರಬರೆಯಲು ತೀರ್ಮಾನಿಸಲಾಯಿತು. | ವಾರ್ಡಕಮಿಟಿ ಸದಸ್ಯರ ಗಮನಕ್ಕೆ ತರಲಾಗಿದೆ |
| 08 | ಜೆ ಸಿ ನಗರ 60 ಅಡಿರಸ್ತೆ, 10ನೇ ಅಡ್ಡರಸ್ತೆಯಲ್ಲಿ BWSSB ಯವರು ಅಗೆದಿರುವುದರ ಬಗ್ಗೆ ನಿವಾಸಿಗಳಾದ ಶ್ರೀ ಧಶರತ್ ನಾಯ್ಡು ರವರ ದೂರಿನ ಬಗ್ಗೆ | ಸ. ಅ. BWSSB |

ಈ ಮೇಲಿನ ಎಲ್ಲಾ ಸಮಸ್ಯೆಗಳ ಬಗ್ಗೆ ವಾರ್ಡ ಸಮಿತಿ ಸಭೆಯಲ್ಲಿ ಚರ್ಚಿಸಿ ಸಂಬಂದಪಟ್ಟ ಅಧಿಕಾರಿಗಳಿಗೆ ಕ್ರಮವಹಿಸಲು ಸೂಚಸಿದ ನಂತರ ಅಧ್ಯಕ್ಷರು ಮತ್ತು ಸದಸ್ಯರ ಅನುಮತಿಯಮೇರೆಗೆ ಸದರಿ ಈ ಸಭೆಯನ್ನು ಮುಕ್ತಾಯಗೋಳಿಸಲಾಯಿತು.

(signature) 15/10/22

ನೋಡಲ್ ಅಧಿಕಾರಿ (ಅಧ್ಯಕ್ಷರು)
ವಾರ್ಡ ಕಮಿಟಿ ವಾರ್ಡ-52
ಮಹಾಲಕ್ಷ್ಮೀಪುರಂ

bbmp198wardcommittee@gmail.com